# <u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್ ಸಂಖ್ಯೆ.**736/*2022*** ಪಿ.ಡಬ್ಲೂ .1

ದಿನಾಂಕಃ 22-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- **6** ನೇ ಪ್ರತಿವಾದಿ ಪರ ವಕೀಲರಿಂದಃ-

ಸಾಕ್ಷಿಗೆ ಒಂದು ದಾಖಲೆಯನ್ನು ಸದರಿ ವಂಶ ವೃಕ್ಷವನ್ನು ನಾನೇ ಗ್ರಾಮ ಲೆಕ್ಕಾಧಿಕಾರಿಗಳ ಮುಂದೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿ ಕೊಂಡ ಕಾರಣ ಅದರ ಅಸಲು ಪ್ರತಿಯನ್ನು ಪ್ರತಿವಾದಿ ಹಾಜರು ಪಡಿಸುವ ಶರತ್ತಿನಲ್ಲಿ ನಿಡಿ. 1 ಎಂದು ಗುರುತಿಸಲಾಯಿತು. ನಿಪಿ. 1 ನ್ನು ಸಹ ನಾನೇ ಹೇಳಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಮುನಿಸಾದಪ್ಪನವರಿಗೆ ರಾಮತಿಮ್ಮಯ್ಯ, ಲಕ್ಷಯ್ಯ ಮತ್ತು ರಾಮಯ್ಯ ಎಂಬ 3 ಜನ ಮಕ್ಕಳು ಎಂದರೆ ಹೌದು. ಅವರಲ್ಲಿ ರಾಮತಿಮ್ಮಯ್ಯನವರ ಕುಟುಂಬದವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಹೌದು. ರಾಮತಿಮ್ಮಯ್ಯನವರಿಗೆ ಚೌಡಪ್ಪ ಎಂಬ ಮಗ ಇದ್ದರು ಎಂದರೆ ಸರಿ. ಅವರ ಬೆಂಗಳೂರಿನಲ್ಲಿ ವಾಸ ಇದ್ದರು ಎಂದರೆ ಹೌದು. ರಾಮತಿಮ್ಮಯ್ಯನವರು ನಾನು ಜನಿಸುವ ಪೂರ್ವದಲ್ಲಿಯೇ ಮರಣ ಹೊಂದಿದ್ದರು. ನಿಪಿ. 2 ರ ಆದೇಶ ಆಗುವ ಸಮಯದಲ್ಲಿ ಸದರಿ ಚೌಡಪ್ಪನವರು ಜೀವಂತ ಇದ್ದರು ಎಂದರೆ ಹೌದು. ಚೌಡಪ್ಪ, ಲಕ್ಷ್ಮಯ್ಯ ಹಾಗೂ ನನ್ನ ತಂದೆ ರಾಮಯ್ಯ ದಿನಾಂಕಃ 24-06-1995 ರಂದು ಪಂಚಾಯತಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ಸದರಿ ವಿಭಾಗದಲ್ಲಿ ಚೌಡಪ್ಪನವರಿಗೆ ಸರ್ವೆ ನಂ. 29 ರಲ್ಲಿ 1 ಎಕರೆ 1 ಗುಂಟೆ, ಲಕ್ಷ್ಮಯ್ಯ ನವರಿಗೆ ಸರ್ವೆ ನಂ. 12 ರಲ್ಲಿ 1 ಎಕರೆ 7 ಗುಂಟೆ. ರಾಮಯ್ಯನವರಿಗೆ ಸರ್ವೆ ನಂ. 96 ರಲ್ಲಿ 1 ಎಕರೆ 7 ಗುಂಟೆ ಬಂದಿರುತ್ತದೆ ಎಂದರೆ ಸುಳ್ಳು.

ಭೂ-ಮರುಮಂಜೂರಾಗುವ ಸಮಯದಲ್ಲಿ ನಾನು ಜನಿಸಿರಲಿಲ್ಲ.ಸದರಿ ಭೂ-ಮರುಮಂಜೂರಾದ ನಂತರ ಕುಟುಂಬದ ಆಸ್ತಿಗಳ ಏನೆಲ್ಲ ವ್ಯವಹಾರಗಳಾಗಿರುತ್ತವೆ ಎಂದು ಗೊತ್ತಿಲ್ಲ. ಅಮ್ಮಕ್ಕ ಎಂಬುವವರು ನನ್ನ ಅತ್ತೆ, ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅವರು ಮದುವೆಯಾಗಿ ಬೇರೆ

ಹೋಗಿರುತ್ತಾರೆ. ಅವರನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ. ದಿನಾಂಕಃ 24-06-1995 ರ ವಿಭಾಗ ಪತ್ರದಂತೆ ನಾವುಗಳು ಖಾತೆ ಪಹಣಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸುಳ್ಳು. ದಿನಾಂಕಃ 29-12-2006 ರಂದು ನಾವುಗಳು 6 ನೇ ಪ್ರತಿವಾದಿಗೆ GPA ಬರೆದುಕೊಟ್ಟಿರುತ್ತೇವೆ ಎಂದರೆ ಸುಳ್ಳು. ಸದರಿ ದಾಖಲೆಗೆ ನಾನು ಸಹ ಒಪ್ಪಿಗೆ ಸಹಿ ಹಾಕಿರುತ್ತೇನೆ ಎಂದರೆ ಸುಳ್ಳು. ನಮ್ಮ ಕುಟುಬಂದಲ್ಲಿ ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ 2-3 ಜಮೀನುಗಳಿವೆ. ಬೇರೆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇಲ್ಲ.

ದಾವಾ ಐಟಂ ನಂ. 1 ಇನಾಮತಿ ಜಮೀನು ಎಂದರೆ ಸಾಕ್ಷಿ ಗ್ರಾಂಟ್ ಜಮೀನು ಎಂದು ನುಡಿಯುತ್ತಾರೆ. ನಾನು ಭೂ-ಮಂಜೂರಾಗುವ ಸಮಯದಲ್ಲಿ ಜನಿಸಿಲ್ಲದೆ ಇದ್ದ ಕಾರಣ ರಾಮತಿಮ್ಮಯ್ಯನವರಿಗೂ ಸೇರಿ ಮಂಜೂರಾಗಿರುವ ವಿಚಾರ ಗೊತ್ತಿಲ್ಲ. ಆ ಕಾರಣದಿಂದಲೇ ರಾಮತಿಮ್ಮಯ್ಯನವರ ಕುಟುಂಬದವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಗಳನ್ನು ನಾವುಗಳು ಲಪಟಾಂದುಸುವ ಉದ್ದೇಶದಿಂದ ರಾಮತಿಮ್ಮಯ್ಯನವರ ಕುಟುಂಬದವರನ್ನು ಹೊರತುಪಡಿಸಿ ನಿಪಿ. 1 ನ್ನು ಸೃಷ್ಟಿಸಿ ಹಾಜರು ಮಾಡಿರುತ್ತೇನೆ ಎಂದರೆ ಸುಳ್ಳು. ರಾಮತಿಮ್ಮಯ್ಯನವರಿಗೆ ಬೇರೆ ಜಮೀನುಗಳು ಮಂಜೂರಾಗಿವೆ. ಸದರಿ ಜಮೀನುಗಳ ಸರ್ವೆ ನಂಬರ್ ಗೊತ್ತಿಲ್ಲ. ಸದರಿ ದಾಖಲೆಗಳನ್ನು ಹಾಜರು ಮಾಡಲು ಸಾಧ್ಯವಿಲ್ಲ. ರಾಮತಿಮ್ಮಯ್ಯನವರಿಗೆ ಯಾವುದೇ ಜಮೀನುಗಳು ಮಂಜುರಾಗಿಲ್ಲದೆ ಇದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ರಿಂದ 5 ನೇ ಪ್ರತಿವಾದಿಗಳು ದಿಾನಂಕಃ 13-03-2006 ರಂದು ನಾಗೇಶ್ ಎಂಬುವವರರಿಗೆ GPA ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ಸದರಿ ನಾಗೇಶ್ ರವರು GPA ಆಧಾರದ ಮೇಲೆ 6 ನೇ ಪ್ರತಿವಾದಿಗೆ ದಿನಾಂಕಃ 21-04-2006 ರಂದು ಐಟಂ ನಂ. 3 ರ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಕ್ರಯದ ಆಧಾರದ ಮೇಲೆ 6 ನೇ ಪ್ರತಿವಾದಿಗೆ ಕಂದಾಯದ ದಾಖಲೆಗಳು ಬದಲಾವಣೆಯಾಗಿದ್ದು ಅವರೆ ಸ್ವಾ ದೀನದಲ್ಲಿದ್ದಾರೆ ಎಂದರೆ ಸುಳ್ಳು. ನಿಪಿ.18 ರಿಂದ 20 ರಲ್ಲಿ 6 ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಹೌದು. ನಿಪಿ. 14 ರಲ್ಲಿಯೂ ಸಹ 6 ನೇ ಪ್ರತಿವಾದಿಯ ಹೆಸರು ನಮೂದಾಗಿದೆ ಎಂದರೆ ಹೌದು. ಮೋಸದಿಂದ ಆ ರೀತಿ ದಾಖಲೆ ಮಾಡಿಕೊಂಡಿದ್ದಾರೆ.

ಈ ಮೇಲೆ ಹೇಳಿದ ಪಂಚಾಯತಿ ವಿಭಾಗ ಆಗಿರುವ ವಿಚಾರ ನನಗೆ ಯಾವಾಗ ಗೊತ್ತಾಯಿತು ಎಂದರೆ ಆ ರೀತಿ ಯಾವುದೇ ವಿಭಾಗ ಆಗಿಲ್ಲ. ಕಂದಾಯದ ದಾಖಲೆಗಳ ಬಗ್ಗೆ 2016 ರಲ್ಲಿ ಗೊತ್ತಾಗಿರುತ್ತದೆ. ಸದರಿ ಕಂದಾಯದ ದಾಖಲೆಗಳ ಬಗ್ಗೆ ನಾನು ಪ್ರಶ್ನೆ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರು ಮಾಡಿಲ್ಲ. ಹಾಜರು ಮಾಡಲು ತೊಂದರೆ ಇಲ್ಲ. 6 ನೇ ಪ್ರತಿವಾದಿ ತಾನು ಖರೀದಿಸಿದ ಐಟಂ ನಂ. 3 ರ 7 ನೇ ಪ್ರತಿವಾದಿಗೆ 5 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಕ್ರಯದಂತೆ 7 ನೇ ಪ್ರತಿವಾದಿಯೇ ಸ್ವಾದೀನದಲ್ಲಿದ್ದಾರೆ ಎಂದರೆ ಸುಳ್ಳು. ನಂತರ ಐಟಂ ನಂ. 3 ರ 5 ಗುಂಟೆ ಜಮೀನನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಕ್ರಯದ ಆಧಾರದ ಮೇಲೆ 8 ನೇ ಪ್ರತಿವಾದಿಯೇ ಸ್ವಾದೀನದಲ್ಲಿದ್ದಾರೆ ಎಂದರೆ ಸುಳ್ಳು. ನಾವು ಮತ್ತು ನನ್ನ ಚಿಕ್ಕಪ್ಪಂದಿರು ರಾ ಹಿಂದಿಯೇ ವಿಭಾಗ ಮಾಡಿಕೊಂಡು ನಮ್ಮ ಭಾಗಕ್ಕೆ ಬಂದ ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ವಿಭಾಗದ ಹಕ್ಕು ಇಲ್ಲ ಎಂದರೆ ಸುಳ್ಳು.

ಉಳಿದ ಪ್ರತಿವಾದಿಗಳ ಪರ ಪಾಟೀ ಸವಾಲು ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.